## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಪ್ರಶಾಂತ ವೈ. ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 261 ಗ್ರಾಪಂಕಾ 2013, ದಿನಾಂಕ: 30.11.2013
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. LOK/INQ/14A/491/2013/ARE-11, ದಿನಾಂಕ: 25.11.2016
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 09.01.2017
4) ಶ್ರೀ ಪ್ರಶಾಂತ ವೈ. ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 07.02.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಶ್ರೀ ಪ್ರಶಾಂತ ವೈ. ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ)ನಿಯಮಾವಳಿಗಳು 1957 ರ ನಿಯಮ 14(ಎ) ರಡಿಯಲ್ಲಿ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು–11 ಕರ್ನಾಟಕ ಲೋಕಾಯುಕ್ತ ಇವರು ಸದರಿಯವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

> "ಶ್ರೀ ಪ್ರಶಾಂತ ವೈ. ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಸದರಿ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದೂರುದಾರರಾದ ಶ್ರೀ ನಾಮದೇವ ಭರಮಪ್ಪ ಮಂಕಳೆ, ಸೊಲ್ಲಾಪುರದ ವಾಸಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ನೀಡಿದ ದೂರಿನಲ್ಲಿ ಸೊಲ್ಲಾಪುರ ಗ್ರಾಮ ಪಂಚಯತಿಯು ಸರ್ಕಾರದ ವಿವಿಧ ಯೋಜನೆಗಳನ್ನು ಸರಿಯಾಗಿ ನಿರ್ವಹಿಸದೇ ಅಕ್ರಮಗಳನ್ನು ಎಸಗಿದ್ದಾರೆ ಮತ್ತು ನರೇಗಾ ಯೋಜನೆಯಡಿಯಲ್ಲಿ ಬಡಜನರಿಗೆ ಕೆಲಸ ಕೊಟ್ಟಿಲ್ಲ ಮತ್ತು ಕಾಮಗಾರಿಗಳನ್ನು ನಿರ್ವಹಿಸಿಲ್ಲ ಎಂದು ದೂರಿದ ಹಿನ್ನೆಲೆಯಲ್ಲಿ ನಡೆದ ತನಿಖೆಯಲ್ಲಿ ಶ್ರೀ ಮಾರುತಿ ರಾಮಚಂದ್ರ ಘಾಟಗೆ ಮತ್ತು ಶ್ರೀ ಚಂದ್ರಕಾಂತ ಸುಬ್ಬರಾವ್ ಮನೋಳಿ ಎಂಬ ಸತ್ತವರ ಹೆಸರಿಗೆ ಮತ್ತು ಕೂಲಿ ಮೊತ್ತವನ್ನು ಈಗಾಗಲೇ ನೌಕರಿಯಲ್ಲಿರುವ ಶ್ರೀ ಮಹದೇವಯ್ಯ ಸಾತಲಿಂಗಯ್ಯ ಹಿರೇಮಠ ಇವರಿಗೆ ಕೂಲಿ ಮೊತ್ತವನ್ನು ಪಾವತಿ ಮಾಡಿದ್ದು, ಸರ್ಕಾರಿ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಮಾಣಿಕತೆ ಹಾಗೂ ನಿಷ್ಠೆ ತೋರದೆ ಮತ್ತು ಸರ್ಕಾರಿ ನೌಕರರ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966, ನಿಯಮ 3(1)(i)(ii) ಮತ್ತು (iii) ರನ್ವಯ ದುರ್ನಡತೆ ಎಸಗಿರುತ್ತಾರೆ."

ವಿಚಾರಣಾಧಿಕಾರಿಯವರು, ದಿನಾಂಕ 22.11.2016. ರಂದು ಮಾನ್ಯ ಉಪಲೋಕಾಯುಕ್ತರಿಗೆ ವಿಚಾರಣಾ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯ ಅನುಸಾರ ಶ್ರೀ ಪ್ರಶಾಂತ ವೈ. ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧದ ಆರೋಪವು ಸಾಬೀತಾಗಿರುವುದೆಂದು ನಿರ್ಣಯಿಸಿರುತ್ತಾರೆ.

ಈ ವರದಿಯ ಮೇಲೆ ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ದಿನಾಂಕ 25.11.2016 ರಂದು ಮಾಡಿರುವ ಶಿಫಾರಸ್ಸಿನಲ್ಲಿ "ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 8 (iii) ಅನುಸಾರ ಸದರಿಯವರ ಮುಂದಿನ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಮತ್ತು ನಿಯಮ 8 (iv A) ಅನುಸಾರ ಸದರಿಯವರ ಬಡ್ತಿಯನ್ನು ಎರಡು ವರ್ಷಗಳ ಅವಧಿಗೆ ತಡೆಹಿಡಿಯುವ ದಂಡನೆ ವಿಧಿಸಿ ಮೇಲೆ ಓದಲಾದ (2) ರಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

-

ನಿಯಮಾನುಸಾರ ಆರೋಪಿತ ನೌಕರರಿಗೆ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಮೇಲೆ ಓದಲಾದ (3) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು ಈ ನೋಟಿಸಿಗೆ ಶ್ರೀ. ಎಸ್.ವಿ. ಮಾದನಶೆಟ್ಟಿ, ಇವರು ದಿನಾಂಕ: 07.02.2017 ರಂದು ಲಿಖಿತ ಹೇಳಿಕೆ ಸಲ್ಲಿಸಿರುತ್ತಾರೆ. ಸದರಿ ಲಿಖಿತ ಹೇಳಿಕೆಯಲ್ಲಿ ಅವರು ಸಲ್ಲಿಸಿರುವ ಆಕ್ಷೇಪಣೆಗಳು ಈ ಕೆಳಕಂಡಂತಿವೆ.

1) ಆರೋಪಿತ ಮೊತ್ತ ರೂ.2625.00ಗಳನ್ನು 3 ಜನ ಫಲಾನುಭವಿಗಳಿಂದ ವಸೂಲಿ ಮಾಡಿ, ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ.
2) ವಿಚಾರಣಾ ಅಧಿಕಾರಿ ಶಿಫಾರಸ್ಸುಗಳು ನಿಯಮಬಾಹಿರಾಗಿದ್ದು, ಇವುಗಳನ್ನು ಪರಿಗಣಿಸಿ ಮಾನ್ಯ ಉಪಲೋಕಾಯುಕ್ತರು ದಂಡನಾ ಶಿಫಾರಸ್ಸು ಮಾಡಿರುತ್ತಾರೆ. ದಂಡನಾ ಶಿಫಾರಸ್ಸನ್ನು ಒಪ್ಪಿಕೊಳ್ಳುವ ಅಥವಾ ತಳ್ಳೀ ಹಾಕುವ ಅಧಿಕಾರ ಶಿಸ್ತು ಪ್ರಾಧಿಕಾರಕ್ಕೆ ಇರುತ್ತದೆ. ಈ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶ ಸಂಖ್ಯೆ: ಡಬ್ಲ್ಯೂ.ಎ. ನಂ.8594/2012 – 2015(2)ಎಕೆಆರ್399 ರಲ್ಲಿ ತಿಳಿಸಲಾಗಿದೆ.
3) ಮೃತ ಕುಟುಂಬ ಸದಸ್ಯರ ಹೆಸರುಗಳನ್ನು ಮ.ಗಾಂ.ರಾ.ಗ್ರಾ.ಉ.ಖಾ.ಯೋಜನೆ ಫಾರಂ ನಂ.6 ರಲ್ಲಿ ಸದರಿ ಕುಟುಂಬದ ಮುಖ್ಯಸ್ಥರು ದಾಖಲಿಸಿರುತ್ತಾರೆ. ಇದನ್ನು ಬದಲಾವಣೆ ಮಾಡಲು ಗ್ರಾಮ ಪಂಚಾಯತಿ ಕಾರ್ಯದರ್ಶಿಗೆ ಅಧಿಕಾರ ಇರುವುದಿಲ್ಲ. ಕೂಲಿ ಕೆಲಸಕ್ಕೆ ಹಾಜರಾದ ಕೂಲಿಕಾರರ ಹಾಜರಾತಿಯನ್ನು 'ಉದ್ಯೋಗ ಮಿತ್ರ' ನಿರ್ವಹಿಸಬೇಕಾಗಿದ್ದು, ಇದರಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿ ಪಾತ್ರ ಇರುವುದಿಲ್ಲ. ಗ್ರಾಮ ಪಂಚಾಯತಿ ಕಾರ್ಯದರ್ಶಿಯು ಈ ಹಾಜರಾತಿಗೆ ಅನುಗುಣವಾಗಿ ಬಿಲ್‌ಗಳನ್ನು ತಯಾರಿಸುವ ಜವಾಬ್ದಾರಿ ಇರುತ್ತದೆ. ಒಂದು ವೇಳೆ ಸದರಿ ಎನ್.ಎಂ.ಆರ್. ನಲ್ಲಿ ಕೂಲಿಕಾರರ ಹಾಜರಾತಿ ಬಗ್ಗೆ ಏನಾದರೂ ತಪ್ಪುಗಳಿದ್ದಲ್ಲಿ ಅದು ಉದ್ಯೋಗ ಮಿತ್ರನ ಜವಾಬ್ದಾರಿ ಆಗಿರುತ್ತದೆ.
4) ಈ ಹಾಜರಾತಿ ಪಟ್ಟಿಯನ್ವಯ ಬಿಲ್ ಪಾವತಿ ಮಾಡಲಾಗಿದ್ದು, ಲೋಕಾಯುಕ್ತ ಸಂಸ್ಥೆಗೆ ದೂರು ಸಲ್ಲಿಕೆಯಾಗಿರುವುದು ತಿಳಿದುಬಂದ ಕೂಡಲೇ ಸದರಿ ಕುಟುಂಬದವರ ಮನೆಗಳಿಗೆ ಭೇಟಿ ನೀಡಿ, ಹೆಚ್ಚುವರಿಯಾಗಿ ಪಾವತಿ ಮಾಡಲಾದ ಹಣವನ್ನು ವಾಪಸ್ ಪಡೆದಿರುತ್ತೇನೆ.
5) ಆದುದರಿಂದ ತನ್ನಿಂದ ಯಾವುದೆ ಹಣ ದುರುಪಯೋಗವಾಗಿಲ್ಲವೆಂದು ತಿಳಿಸಿ, ಈ ಆಕ್ಷೇಪಣೆಗಳನ್ನು ಪರಿಗಣಿಸಿ ದೋಷಮುಕ್ತರನ್ನಾಗಿಸಲು ಮನವಿ ಮಾಡಿರುತ್ತಾರೆ.

ವಿಚಾರಣಾಧಿಕಾರಿಯವರ ವರದಿಯನ್ನು ಪರಿಶೀಲಿಸಲಾಗಿ, ವಿಚಾರಣಾಧಿಕಾರಿಯವರ ನಿರ್ಣಯದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತಿದೆ.

That the DGO Sri Prashanth Y.Munavalli, Grama panchayath Secretary, Munavalli Grama Panchayath, Hukkeri Taluk, Belagavi District while discharging his duties, has committed illegalities in providing employement to labourers under MGNREGA and DGO had made payment under MGNREGA scheme to two dead persons namely, Sri Maruthi Ramachandra Ghatage and Sri Chandrakantha Subbarao Manoli and to Sri Mahadevaiah Sathalingaiah Hiremath already employed, which shows that DGO was negligent in not verifying before providing employement and making payments in the names of below said persons,

1. ಶ್ರೀಮತಿ ಇಂದು ಮಲೆ ಮಾರುತಿ ಘಾಟಿ ಲೇಟ್ ಮಾರುತಿ ರಾಮಚಂದ್ರ ಘಾಟಗೆ, ಸೊಲ್ಲಾಪುರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ದಿನಾಂಕ 13.10.2011 ರಂದು ಹೇಳಿಕೆಯನ್ನು ನೀಡಿದ್ದು, ಸದರಿ ಹೇಳಿಕೆಯಲ್ಲಿ ಶ್ರೀ ಲಕ್ಷ್ಮಿಗುಡಿ ಹತ್ತಿರ ಬಾವಿಗೆ ಸಂರಕ್ಷಣೆ ಗೋಡೆ ನಿರ್ಮಾಣ ಕಾಮಗಾರಿಯಲ್ಲಿ ಅವರ ಕುಟುಂಬ ಕೂಲಿ ಕೆಲಸ ಮಾಡಿ 49 ದಿನಗಳ ರೂ.6,125/– ಕೂಲಿಯನ್ನು ಪಡೆದಿರುತ್ತಾರೆಂದು, ಹಾಗೂ ಅವರ ಪತಿಯ ದಿನಾಂಕ 28.07.2010 ರಂದು ಮರಣ ಹೊಂದಿರುತ್ತಾರೆ. ಇದನ್ನು ಗ್ರಾಮ ಪಂಚಾಯತಿ ಗಮನಕ್ಕೆ ತಂದಿರುವುದಿಲ್ಲ ಹಾಗೂ ಅವರು ಕಡು ಬಡವಳಾಗಿದ್ದರಿಂದ ಅವರ ಪತಿಯ ಹೆಸರಿನ ಹಣವನ್ನು ಪಡೆದುಕೊಂಡಿರುತ್ತಾರೆಂದು, ಗ್ರಾಮ ಪಂಚಾಯತಿಯ ಸೂಚನೆಯ ಮೇರೆಗೆ ಸದರಿ ಹಣವನ್ನು ಮರು ಪಾವತಿಸಿರುತ್ತೇನೆಂದು ತಿಳಿಸಿರುತ್ತಾರೆ, ಹಾಗೂ ಅವರ ಪತಿಯ ಕೂಲಿ ಹಣ ರೂ.875/– ನ್ನು ಮರಳಿಸಿರುತ್ತಾರೆಂದು ಹೇಳಿರುತ್ತಾರೆ.
2. ಶ್ರೀಮತಿ ಅನ್ನವ್ವ ಚಂದ್ರಕಾಂತ ಮನ್ನೋಳಿ ಕೋಂ ಲೇಟ್ ಚಂದ್ರಕಾಂತ್ ಸುಬ್ಬಾರಾವ್ ಮನ್ನೋಳಿ, ಸೊಲ್ಲಾಪುರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ದಿನಾಂಕ 13.10.2011 ರಂದು ಹೇಳಖಿಕೆಯನ್ನು ಸಲ್ಲಿಸಿದ್ದು, ಸದರಿ ಹೇಳಿಕೆಯಲ್ಲಿ ಶ್ರೀ ಲಕ್ಷ್ಮಿಗುಡಿ ಹತ್ತಿರ ಬಾವಿಗೆ ಸಂರಕ್ಷಣೆ ಗೋಟೆ ನಿರ್ಮಾಣ ಕಾಮಗಾರಿಯಲ್ಲಿ ಅವರ ಕುಟುಂಬ ಕೂಲಿ ಕೆಲಸ ಮಾಡಿ 21 ದಿನಗಳ ರೂ.2,625/– ಕೂಲಿಯನ್ನು ಪಡೆದಿರುತ್ತಾರೆಂದು ಹಾಗೂ ಅವರ ಪತಿಯು ದಿನಾಂಕ 07.11.2010 ರಂದು ಮರಣ ಹೊಂದಿರುತ್ತಾರೆ. ಹಾಗೂ ಅವರು ಕಡು ಬಡವಳಾಗಿದ್ದರಿಂದ ಅವರ ಪತಿಯ ಹೆಸರಿನ ಹಣವನ್ನು ಪಡೆದುಕೊಂಡಿರುತ್ತಾರೆಂದು, ಗ್ರಾಮ ಪಂಚಾಯತಿಯ ಸೂಚನೆಯ ಮೇರೆಗೆ ಸದರಿ ಹಣವನ್ನು ಮರುಪಾವತಿಸಿದ್ದೇನೆಂದು ತಿಳಿಸಿರುತ್ತಾರೆ ಹಾಗೂ ಅವರ ಪತಿಯ ಕೂಲಿ ಹಣ ರೂ.875/– ನ್ನು ಮರಳಿಸಿರುತ್ತಾರೆಂದು ತಿಳಿಸಿರುತ್ತಾರೆ.
3. ಶ್ರೀಮತಿ ರೇಖಾ ಮಹದೇವ ಹಿರೇಮಠ ಕೋಂ ಲೇಟ್ ಮಹದೇವಯ್ಯ ಸತಲಿಂಗಯ್ಯ ಹಿರೇಮಠ, ಸೊಲ್ಲಾಪುರ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ರವರು ದಿನಾಂಕ 10.10.2011 ರಂದು ಹೇಳಿಕೆಯನ್ನು ಸಲ್ಲಿಸಿದ್ದು, ಸದರಿ ಹೇಳಿಕೆಯಲ್ಲಿ ಶ್ರೀ ಲಕ್ಷ್ಮಿಗುಡಿ ಹತ್ತಿರ ಬಾವಿಗೆ ಸಂರಕ್ಷಣೆ ಗೋಡೆ ನಿರ್ಮಾಣ ಕಾಮಗಾರಿಯಲ್ಲಿ ಅವರ ಕುಟುಂಬ ಕೂಲಿ ಕೆಲಸ 21 ದಿನಗಳ ರೂ.2,625/– ಕೂಲಿಯನ್ನು ಪಡೆದಿರುತ್ತಾರೆಂದು, ಹಾಗೂ ಅವರು ಕಡು ಬಡವಳಾಗಿದ್ದರಿಂದ ಅವರ ಪತಿಯ ಹೆಸರಿನ ಹಣವನ್ನು ಪಡೆದುಕೊಂಡಿರುತ್ತಾರೆಂದು, ಗ್ರಾಮ ಪಂಚಾಯತಿಯ ಸೂಚನೆಯ ಮೇರೆಗೆ ಸದರಿ ಹಣವನ್ನು ಮರುಪಾವತಿಸಿರುತ್ತೇನೆಂದು ತಿಳಿಸಿರುತ್ತಾರೆ ಹಾಗೂ ಅವರ ಪತಿಯ ಕೂಲಿ ಹಣ ರೂ.875/– ನ್ನು ಮರಳಿಸಿರುತ್ತಾರೆಂದು ಹೇಳಿರುತ್ತಾರೆ.

and thereby DGO failed to maintain absolute integrity and devotion to duty and committed an act which is unbecoming of government sevants and thus DGO is guilty of misconduct under rule 3(1)(i) to (iii) of KCS(conduct) Rules, 1966.

The Inquiry Officer (Additional Registrar of Enquiries-11) of proper appreciation of oral and documentary evidence has held that, the Disciplinary Authority has proved the above charge againt DGO."

ಸರ್ಕಾರವು ಪರಿಶೀಲಿಸಿ, ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸಿನಲ್ಲಿ ಎತ್ತಿರುವ ಆಕ್ಷೇಪಣೆಗಳಿಗೆ ಸಂಬಂಧ ಪಟ್ಟಂತೆ ವಿಚಾರಣಾಧಿಕಾರಿಯವರು ತಮ್ಮ ವರದಿಯಲ್ಲಿ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ಕಾರಣಗಳು ಸಮರ್ಥನೀಯವಾಗಿದೆ. ಆದುದರಿಂದ ಆಪಾದಿತರ ಆಕ್ಷೇಪಣೆಗಳು ಸಮಂಜಸವಾಗಿ ಇರುವುದಿಲ್ಲವಾದ್ದರಿಂದ, ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನನ್ವಯ ಶ್ರೀ ಪ್ರಶಾಂತ ವೈ.ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಇರುವ ದಿನದಿಂದ ಮುಂಬಡ್ತಿಯನ್ನು ಎರಡು ವರ್ಷಗಳ ಕಾಲ ತಡೆಹಿಡಿಯುವ (withholding two annual increments with cumulative effect and also to defer promotion by two years, from the date on which DGO becomes due for promotion) ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 920 ಗ್ರಾಪಂಕಾ 2016, ಬೆಂಗಳೂರು, ದಿನಾಂಕ: 31.03.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಪ್ರಶಾಂತ ವೈ.ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಎರಡು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮವಾಗಿ ತಡೆಹಿಡಿಯಲು ಹಾಗೂ ಸದರಿ ನೌಕರರು ಬಡ್ತಿಗೆ ಅರ್ಹತೆ ಇರುವ ದಿನದಿಂದ ಮುಂಬಡ್ತಿಯನ್ನು ಎರಡು ವರ್ಷಗಳ ಕಾಲ ತಡೆಹಿಡಿಯುವ (withholding two annual increments with cumulative effect and also to defer promotion by two years, from the date on which DGO becomes due for promotion) ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
5) ಕಾರ್ಯನಿರ್ವಾಹಕ ಅಧಿಕಾರಿ, ಹುಕ್ಕೇರಿ ತಾಲ್ಲೂಕು ಪಂಚಾಯತಿ, ಹುಕ್ಕೇರಿ, ಬೆಳಗಾವಿ ಜಿಲ್ಲೆ.
   (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
6) ಶ್ರೀ ಪ್ರಶಾಂತ ವೈ.ಮುನವಳ್ಳಿ, ಹಿಂದಿನ ಕಾರ್ಯದರ್ಶಿ, ಸೊಲ್ಲಾಪುರ ಗ್ರಾಮ ಪಂಚಾಯತಿ, ಹುಕ್ಕೇರಿ ತಾಲ್ಲೂಕು, ಬೆಳಗಾವಿ ಜಿಲ್ಲೆ
7) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.